ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ರಾಷ್ಟ್ರಕವಿ ಕುವೆಂಪು ವಿಶ್ವವಿದ್ಯಾನಿಲಯ ಏನಿದೆ ಅದರ ಪರೀಕ್ಷಾ ವಿಭಾಗ ಮಾತ್ರ ಬಾಡಿಗೆ ಕಟ್ಟಡದಲ್ಲಿದೆ, ಉಳಿದದ್ದು ಬಾಡಿಗೆ ಕಟ್ಟಡದಲ್ಲಿಲ್ಲ. ನಾನು ಒಪ್ಪುತ್ತೇನೆ. ಕುವೆಂಪು ಅವರು ರಾಷ್ಟ್ರಕವಿಗಳು, ವಿಶ್ವಕವಿಗಳು, ಅದರಲ್ಲೂ ನಮ್ಮ ಜೊತೆಯಲ್ಲಿ ಇರುವಂತಹವರು, ಅಂಥವರ ಹೆಸರಿನಲ್ಲಿ ವಿಶ್ವವಿದ್ಯಾನಿಲಯ ಬಹಳ ಉಜ್ವಲವಾಗಿ ಬೆಳೆಯಬೇಕೆಂಬ ಉದ್ದೇಶದಿಂದ ಪ್ರಾರಂಭ ಮಾಡಿದ್ದು. ಆದರೆ ಪ್ರಾರಂಭಿಕ ವರ್ಷಗಳಲ್ಲಿ ಕಟ್ಟಡದ ಕೆಲಸ ಇರಬಹುದು, ಶಿಕ್ಷಣದ ವಿಚಾರ ಇರಬಹುದು, ಅಷ್ಟು ಉನ್ನತ ಮಟ್ಟಕ್ಕೆ ಬೆಳೆಯಲಿಕ್ಕೆ ನಾನು ಕಾರಣಗಳಿಂದ ಸಾಧ್ಯವಾಗಲಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ತಾವು ಹೇಳಿದಂತೆ, ಕಟ್ಟಡಗಳ ಬಗ್ಗೆ ಸರ್ಕಾರ ವಿಶೇಷ ಆಸಕ್ತಿ ತೆಗೆದುಕೊಂಡು, ಬೇರೆ ಬೇರೆ ಕಾರ್ಯಕ್ರಮಗಳ ರೂಪುರೇಷೆ ತಯಾರು ಮಾಡಿ ಬರುವ ವರ್ಷದಿಂದ 1991-92 ರಿಂದ ಜಾರಿಗೆ ತರುತ್ತೇವೆ.

ಮೈಸೂರು ಜಿಲ್ಲೆಯಲ್ಲಿ ಕಪ್ಪುಹಲಗೆ ಯೋಜನೆ

1135 - ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಕಪ್ಪುಹಲಗೆ ಯೋಜನೆಯಡಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗಾಗಿ 350 ಜನ ಅಭ್ಯರ್ಥಿಗಳಿಗೆ 17-5-89 ರಂದು ಅರ್ಜಿ ಕರೆದು 29-6-90 ರಂದು ಸಂದರ್ಶನ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಂದರ್ಶನದ ಮೂಲಕ ಸುಮಾರು 750 ಜನ ಅಭ್ಯರ್ಥಿಗಳ ಆಯ್ಕೆಯಾಗಿರುವುದು ನಿಜವೇ?

ಇ) ಪ್ರಸಕ್ತ ಹೊಸ ಆಯ್ಕೆ ನೀತಿಯ ಅನುಸಾರದ ಮೇಲೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆಲ್ಲ ಉದ್ಯೋಗ ದೊರಕುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಹೌದು.

ಆ) 3500 ಅಭ್ಯರ್ಥಿಗಳ ಸಂದರ್ಶನ ನಡೆಸಲಾಗಿದೆಯೇ ವಿನಹಃ ಅಭ್ಯರ್ಥಿಗಳ ಆಯ್ಕೆ ಮಾಡಿರುವುದಿಲ್ಲ.

ಇ) ಮೇಲೆ ತಿಳಿಸಿದ ನೇಮಕಾತಿಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಹರ್ಷಕುಮಾರ ಗೌಡ : ಸಚಿವರು ಉತ್ತರದಲ್ಲಿ ಮೈಸೂರು ಜಿಲ್ಲೆಯಲ್ಲಿ 1989ರಲ್ಲಿ ಶಿಕ್ಷಕರ ಹುದ್ದೆಗಾಗಿ ಒಂದು ಸಂದರ್ಶನ ನಡೆಯಿತು ಆಗ 3500 ಅಭ್ಯರ್ಥಿಗಳನ್ನು ಕರೆದು 750 ಅಭ್ಯರ್ಥಿಗಳ ಆಯ್ಕೆ ಮಾಡಿಲ್ಲವೆಂದು ಹೇಳಿದ್ದಾರೆ. ನನಗೆ ಆಲ್ಲಿನ ಯುವಕರು ಬಂದು ನಾವೆಲ್ಲಾ ಆಯ್ಕೆಯಾಗಿದ್ದೇವೆ, ನಮ್ಮನ್ನು ಕಡೆಗಣಿಸಿದ್ದಾರೆ. ಈಗ ಸಂದರ್ಶನಕ್ಕೆ ೧೧ ಸಾವಿರ ಅಭ್ಯರ್ಥಿಗಳನ್ನು ಕರೆದಿದ್ದಾರೆ. ನಮ್ಮ ಭವಿಷ್ಯವೆಲ್ಲ ಹಾಳಾಗುವ ಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ. ಅಂದರೆ ಆಯ್ಕೆಯಾಗಬಹುದಾದ 750 ಜನರ ಭವಿಷ್ಯ ಏನಾಗಬೇಕು? ಕರ್ನಾಟಕದಲ್ಲಿ 29 ವರ್ಷ ವಯಸ್ಸನ್ನು ಇದಕ್ಕೆ ನಿಗದಿಮಾಡಿದ್ದೀರಿ, ಅಂಥವರಿಗೆಲ್ಲ ಆಯ್ಕೆ ಮಾಡಿ ಹುದ್ದೆ ಕೊಡುತ್ತೀರಾ? ಆಮೇಲೆ, ಹೆಣ್ಣುಮಕ್ಕಳಿಗೆ 29 ವರ್ಷ ವಯಸ್ಸನ್ನು ಯಾವ ಆಧಾರದ

ಮೇಲೆ ನಿಗದಿ ಮಾಡುತ್ತೀರಿ? ಅದರಲ್ಲೂ ಹಿಂದುಳಿದ ವರ್ಗದ ಹೆಣ್ಣು ಮಕ್ಕಳಿಗೆ ಈ ನಿಗದಿ ಇಟ್ಟರೆ 29 ವರ್ಷ ಅವರು ಕೆಲಸಕ್ಕೆ ಸೇರದೆ ಇದ್ದರೆ ಅವರು 40 ವರ್ಷವಾದಂತಿರುತ್ತಾರೆ. ಆದ್ದರಿಂದ ಅವರಿಗೆ ವಿನಾದರೂ ವಿನಾಯತಿ ಕೊಡಲು ಸಾಧ್ಯವೇ? ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಆಯ್ಕೆ ಬಗ್ಗೆ ನಿಯಮ ಮಾಡಿದ ಬಗ್ಗೆ ಅನೇಕ ಪ್ರಶ್ನೆಗಳು ಈ ಸದನದಲ್ಲಿ ಬಂದಿವೆ, ಅದಕ್ಕೆ ಉತ್ತರ ಕೂಡ ಕೊಟ್ಟಿದ್ದೇವೆ. ಇಡೀ ಕರ್ನಾಟಕದಲ್ಲೇ ನಮ್ಮೆಲ್ಲರ ಅನುಭವದಲ್ಲಿ ಬಂದಿರುವ ಹಾಗೆ ಮೊದಲನೇ ನಿಯಮವನ್ನೇ ಜಾರಿಗೆ ಕೊಟ್ಟಿದ್ದರೆ ಅದರ ಪರಿಣಾಮ ವಿನಾಗುತ್ತಿತ್ತು ಎಂದು ತಾವು ಸ್ವಲ್ಪ ಅಲೋಚನೆ ಮಾಡಿ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ 35-40 ಸಾವಿರ ಅಭ್ಯರ್ಥಿಗಳು ಎನ್‌ರೋಲ್ ಮಾಡಿಸಿದ್ದಾರೆ. ಅದರಲ್ಲಿ ಒಂದು ಹುದ್ದೆಗೆ 5 ಜನ ಅಭ್ಯರ್ಥಿಗಳ ಪ್ರಮಾಣದಲ್ಲಿ ಮೈಸೂರಿನಲ್ಲಿ 750 ಹುದ್ದೆಗಳಿಗೆ 3500 ಅಭ್ಯರ್ಥಿಗಳ ಸಂದರ್ಶನ ನಡೆದಿದೆ. ಅದರಲ್ಲಿ ವಾಸ್ತವವಾಗಿ ಮೈಸೂರು ಜಿಲ್ಲೆಯವರೆಷ್ಟು ಎಂಬುದು ಯಕ್ಷಪ್ರಶ್ನೆ. ಆಮೇಲೆ ನಮ್ಮ ಜಿಲ್ಲೆಯವರು ನೇಮಕ ಆಗಲಿಲ್ಲವೆಂದು ದೊಡ್ಡ ಗೊಂದಲ ನಡೆಯುತ್ತಿದೆ. ಇದು ಜಿಲ್ಲಾಮಟ್ಟದ ಸಮಿತಿ ಆಯಾ ಜಿಲ್ಲೆಗಳಿಗೆ ಸಂಬಂಧಿಸಿದ್ದು, ನೇಮಕಾತಿ ಆದ ಮೇಲೆ ತಮ್ಮ ತಮ್ಮ ಜಿಲ್ಲೆಗಳಿಗೆ ಹೋಗಲಿಕ್ಕೆ ಅರ್ಜಿ ಹಾಕುತ್ತಾರೆ. ಅಲ್ಲಿ ಪುನಃ ಅಧ್ಯಾಪಕರ ಕೊರತೆಯಾಗುತ್ತದೆ. ಈ ಸಮಸ್ಯೆ ಬರಬಾರದು ಮತ್ತು ಆಯಾ ಜಿಲ್ಲೆಯವರಿಗೇ ನೇಮಕಾತಿ ಸಿಗಬೇಕು ಎಂಬ ಉದ್ದೇಶದಿಂದ ಮಾಡಿದ್ದು. ಆಮೇಲೆ 29 ವರ್ಷ ವಯಸ್ಸಿನದು. ಎಷ್ಟೋ ಹೆಂಗಸರು 29 ವರ್ಷವಾದರೂ ಯಾವ ಉದ್ಯೋಗವು ಸಿಗದೆ ಹಾಯುತ್ತಿದ್ದಾರೆ, ಅವರಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದು ಅದನ್ನು ನಿಯಮದಲ್ಲಿ ಅಳವಡಿಸಿದ್ದೇವೆ. ಮೂಲತಃ ಪರಿಶಿಷ್ಟಜಾತಿ, ಪಂಗಡದವರಿಗೆ ಬ್ಯಾಕ್‌ಲಾಗ್ ವಿನಿತ್ತು ಅದನ್ನು ಒದಗಿಸಿಯೇ ಬಾಕಿಯವರಿಗೆ ಕೊಟ್ಟಿದ್ದೇವೆ. ಹಿಂದುಳಿದ ವರ್ಗದವರಿಗೂ ಮೀಸಲಾತಿ ಒದಗಿಸಿ ನೇಮಕಾತಿ ಮಾಡಲು ಪಟ್ಟಿ ಕೊಟ್ಟಿದ್ದೇವೆ. ಅದು ಆಗದೇ ಎಲ್ಲ ಜಿಲ್ಲೆಗಳಲ್ಲಿ ಪಬ್ಲಿಷಾಗಿದೆ. ಅಲ್ಲದೆ ಮೊನ್ನೆ ತಾನೇ ನಮ್ಮ ಬಜೆಟ್‌ನಲ್ಲಿ ಶೇಕಡ 30 ರಷ್ಟು ಸರ್ಕಾರಿ ಹುದ್ದೆಗಳು ಹೆಂಗಸರಿಗೆ ಕೊಡಬೇಕೆಂದು ಮಾಡಿದ್ದೇವೆ. ಮೊದಲು ಇದು ನಿರ್ಣಯ ಆಗಿರಲಿಲ್ಲ, ಮುಂದೆ ಬರುವ ನೇಮಕಾತಿಗಳಲ್ಲಿ ಇದನ್ನು ಅಳವಡಿಸಲು ಸಾಧ್ಯವಾಗುತ್ತದೆ. ಹಿಂದಿನ ನಿಯಾಮಾವಳಿ ಪ್ರಕಾರ ಆಯಾ ಜಿಲ್ಲೆಗಳವರನ್ನು ನೇಮಿಸಲು ಪಟ್ಟಿ ಕೊಟ್ಟಾಗಿದೆ.

ಹೆಚ್ಚುಕಡಿಮೆಯೇನಾದರೂ ಆಗಿದ್ದರೆ ಅಥವಾ ಮೀಸಲಾತಿಯಲ್ಲಿ ಡಿಸ್ಟಿಮಿನೇಷನ್ ಆಗಿದ್ದರೆ ತಾವು ಅರ್ಜಿ ಕೊಡಬಹುದು ಅದನ್ನು ಸರಿಪಡಿಸಿ ನೇಮಕಾತಿ ಆದೇಶವನ್ನು ಆಯಾ ಅಭ್ಯರ್ಥಿಗಳಿಗೆ ಆಮೇಲೆ ಕೊಡುತ್ತೇವೆ.

ಶ್ರೀ ಕೆ. ಹರ್ಷಕುಮಾರಗೌಡ : ಸಾಮಾನ್ಯವಾಗಿ ಹಿಂದುಳಿದ ವರ್ಗಗಳ ನಿರುದ್ಯೋಗಿ ಹೆಣ್ಣುಮಕ್ಕಳು ಯಾರಿದ್ದಾರೆ ಅವರಿಗೆ 29 ವರ್ಷ ಆಗುವ ಹೊತ್ತಿಗೆ 40 ವರ್ಷವಾದಂತೆ ಕಾಣುತ್ತಾರೆ. ಆದ್ದರಿಂದ ಯುವತಿಯರನ್ನು ಯುವಕರ ವಯಸ್ಸಿನ ಜೊತೆ ಸೇರಿಸಬಾರದಿತ್ತು. ನಾನು ಮೊನ್ನೆ ಡಿಡಿಪಿಐ ಹತ್ತಿರ ಚರ್ಚೆ ಮಾಡಿದಾಗ ಅವರೂ ಕೂಡ ಹೌದು ಇದರಲ್ಲಿ ಲೋಪವಾಗಿದೆ, ಮೊದಲೇ ಆಲೋಚನೆ ಮಾಡಬೇಕಾಗಿತ್ತು ಎಂದರು. ಇದನ್ನು ತೀರ್ಮಾನಿಸುವ ಮೊದಲು ಚೆನ್ನಾಗಿ ಆಲೋಚಿಸಿಲ್ಲವೆಂದು ನನ್ನ ಅನಿಸಿಕೆ. ಜೊತೆಗೆ 11 ಸಾವಿರ ಜನ ಅಭ್ಯರ್ಥಿಗಳು ಈಗ ಆಯ್ಕೆಯಾಗುವಾಗ ನಾಯಕ ಜನಾಂಗದ ಹೆಣ್ಣುಮಕ್ಕಳಿಗೆ ಕೆಲಸ ಸಿಗುವಂತಾಗುವುದಿಲ್ಲ. ಆದ್ದರಿಂದ ಅವರಿಗೆ ನ್ಯಾಯ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಅವರ ವೈಯಕ್ತಿಕ ಅಭಿಪ್ರಾಯ. ಆದರೆ ಕರ್ನಾಟಕದಲ್ಲಿ ವ್ಯಾಪಕವಾಗಿ ಬಂದಂತಹ ಅಭಿಪ್ರಾಯದ ಪ್ರಕಾರ, ಬಡವರ್ಗಕ್ಕೆ

ಸೇರಿದ ಮಹಿಳೆಯರೂ ಕೂಡ ನಿರುದ್ಯೋಗಿಗಳಾಗಿ ಉದ್ಯೋಗಕ್ಕಾಗಿ ಕಾಯುತ್ತಿದ್ದಾರೆ. ನಾವು ಕೂಡ ಅನೇಕ ಸಲ ಸಂದರ್ಶನಗಳಲ್ಲಿ ಮಹಿಳೆಯರನ್ನು ಕಾಣುತ್ತೇವೆ. ಇಷ್ಟು ದಿವಸ ಅವಕಾಶ ಸಿಕ್ಕಿರಲಿಲ್ಲ, ಈಗ ಅವಕಾಶ ಸಿಕ್ಕಿದೆ ಎನ್ನುತ್ತಾರೆ. ಆದ್ದರಿಂದ ಇದರಲ್ಲಿ ಲೋಪವಿದೆ ಎಂಬುದು ನಿಮ್ಮ ವೈಯಕ್ತಿಕ ಅಭಿಪ್ರಾಯ. ನಮಗೆ ಹಾಗೆನಿಸುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಒಟ್ಟಾರೆ ಈ ಆಯ್ಕೆ ಎಷ್ಟು ಜಿಲ್ಲೆಗಳಲ್ಲಾಗಿದೆ. ಈ ಅನ್ಯಾಯವನ್ನು ಎಷ್ಟು ಜಿಲ್ಲೆಗಳಲ್ಲಿ ಗುರುತಿಸಿದ್ದೀರಿ. ಬೆಳಗಾಂ ಕಡೆಯ ಅಭ್ಯರ್ಥಿಗಳು ನನ್ನ ಬಳಿ ಬಂದಿದ್ದರು. ಬೆಳಗಾಂನಲ್ಲಿ ಆಯ್ಕೆಯಾಗಿರುವವರೆಲ್ಲ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಂದ ಬಂದವರೆಂದರು, ಇದನ್ನು ಸರಿಪಡಿಸುವುದಕ್ಕೆ ಏನಾದರೂ ಮಾರ್ಗವಿದೆಯೇ. ಇನ್ನೊಂದು ಪ್ರಶ್ನೆ ಏನೆಂದರೆ ಸೆಲೆಕ್ಷನ್ ಮಾಡುವಾಗ ಕ್ರೈಟೀರಿಯಾ ಏನು? ಆ ಕೆಲಸವನ್ನು ಹಿಂದೆ ಒಂದು ಸಮಿತಿ ಮಾಡುತ್ತಿತ್ತು. ಈಗ ಆಯ್ಕೆ ಸಮಿತಿಯಿಲ್ಲ ಎಂದು ಹೇಳಿದ್ದೀರಿ ಈ ಆಯ್ಕೆಯ ಒಟ್ಟಾರೆ ಕ್ರೈಟೀರಿಯಾ ಏನು? ಎಷ್ಟು ಜಿಲ್ಲೆಗಳಲ್ಲಿ ಆಯ್ಕೆಯಾಗಿದೆ, ಎಷ್ಟು ಜಿಲ್ಲೆಗಳಲ್ಲಿ ಆಯ್ಕೆಯಾಗಿಲ್ಲ, ಆಯ್ಕೆಯಾಗಿದ್ದರೂ ಎಷ್ಟು ನೇಮಕಾತಿ ಆಗಿಲ್ಲ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಬೆಳಗಾಂಗೆ ಸಂಬಂಧಿಸಿದಂತೆ ಕೆಲವು ಅರ್ಜಿಗಳನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದಲೇ ಡಿಡಿಪಿಐಗೆ ಕಳಿಸಿಲ್ಲವೆಂದು ಒಂದು ಅರ್ಥ ಬಂತು. ಮತ್ತು ಮೀಸಲಾತಿಯನ್ನು ಅನ್ವಯಿಸುವಾಗ ಮತ್ತು ಕಂಪ್ಯೂಟರ್ ಮಾಡುವಾಗ ವ್ಯತ್ಯಾಸ ಬಂತು. ಅದಕ್ಕಾಗಿ ಲಿಸ್ಟನ್ನು ಅಮಾನತ್ತಿನಲ್ಲಿಟ್ಟು ಇಲ್ಲಿಂದ ಆಯುಕ್ತರ ಕಚೇರಿಯಿಂದ ಜಾಯಿಂಟ್ ಡೈರೆಕ್ಟರ್ ಅವರನ್ನು ಕಳುಹಿಸಿ ವಿಚಾರವನ್ನು ಪುನಃ ಪರಿಶೀಲನೆ ಮಾಡುವ ವ್ಯವಸ್ಥೆಯನ್ನು ನಾವು ಬೆಳಗಾಂನಲ್ಲಿ ಮಾಡಿದ್ದೇವೆ.

ನಾವು ಯಾವ ರೀತಿ ಮಾಡಿದ್ದೇವೆ ಎಂದು ಹೇಳಿದರೆ, ಈ ಅರ್ಜಿಗಳನ್ನು ಆಯಾಯ ಜಿಲ್ಲೆಯ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ನೇರವಾಗಿ ತರಿಸಿದ್ದೇವೆ. ಅರ್ಜಿಗಳನ್ನು ಅಡ್ವರ್‌ಟೈಜ್ ಮಾಡಿ ಕಾಲ್‌ಫಾರ್ ಮಾಡಲಿಲ್ಲ. ನಾವು ಹೊಸದಾಗಿ ನಿಯಮಾವಳಿಯನ್ನು ಪ್ರಕಟನೆ ಮಾಡಿದಮೇಲೆ ನಾವು ಇನ್ನೂ ಹೆಚ್ಚು ಸಮಯವನ್ನು ಕೂಡ ಕೊಟ್ಟೆವು. ಏಕೆಂದರೆ, ಯಾರ್ಯಾರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಲಿಲ್ಲ, ಅವರು ಕೂಡಾ ಮಾಡಬಹುದು ಎಂದು ಹೇಳಿ ಅದಕ್ಕೆ ಅವಕಾಶವನ್ನು ಕೊಟ್ಟೆವು. ಆ ಲಿಸ್ಟ್‌ನೆಲ್ಲಾ ತಂದಮೇಲೆ ಅದನ್ನು ಕಂಪ್ಯೂಟರ್‌ನಲ್ಲಿ ಹಾಕಿ 29 ವರ್ಷಕ್ಕೆ ಮೇಲ್ಪಟ್ಟವರಿಗೆ ಪ್ರಾಧಾನ್ಯತೆಯನ್ನು ಕೊಡಬೇಕು, ಆಯಾ ಗುಂಪಿನಲ್ಲಿ ಅಂಡರ್ ಬ್ಯಾಕ್‌ವರ್ಡ್ ಕ್ಲಾಸ್ ಗುಂಪಿನಲ್ಲಿ ಅಥವಾ ಷೆಡ್ಯೂಲ್ಡ್ ಕ್ಯಾಸ್ಟ್ ಗುಂಪಿನಲ್ಲಿ 29 ವರ್ಷಕ್ಕೂ ಮೇಲ್ಪಟ್ಟವರು ಇಲ್ಲದಿದ್ದರೆ ಇನ್ನು ಕೆಳಗೆ 18 ವರ್ಷದವರೆಗೆ ಅದನ್ನು ಕೆಳಗೆ ಇಳಿಸಬಹುದು. ಈ ರೀತಿಯಲ್ಲಿ ಮಾಡಿ ಕಂಪ್ಯೂಟರ್‌ನಲ್ಲಿ ಹಾಕಿ ಆಯಾ ಗುಂಪಿನಲ್ಲಿ ಲಿಸ್ಟ್‌ನ್ನು ಪ್ರಕಟಪಡಿಸಿದ್ದೇವೆ. ಅದನ್ನು ಪ್ರಕಟಪಡಿಸುವ ಮೊದಲು ಅಲ್ಲಿ ಇರತಕ್ಕಂಥ ಡಿಡಿಪಿಐ ಅವರು, ಜಿಲ್ಲಾ ಪರಿಷತ್ತಿನ ಮುಖ್ಯಕಾರ್ಯದರ್ಶಿಗಳ ಜೊತೆಯಲ್ಲಿ ಕುಳಿತುಕೊಂಡು ಅದನ್ನು ಪರಿಶೀಲನೆ ಮಾಡಿದ್ದಾರೆ. ಅದರೂ ಕೂಡ ಮೀಸಲಾತಿಯಲ್ಲಿ ಹೆಚ್ಚು ಕಡಿಮೆಯಾಗಿದೆಯೇ ಎಂದು ನೋಡಿದಾಗ ಕೆಲವು ತಪ್ಪುಗಳಾಗಿದ್ದವು. ಅದೇನೆಂದರೆ, ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರೇ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಜನರಲ್ ಮೆರಿಟ್ ಎಂದು ಹಾಕಿ ಡಿಡಿಪಿಐ ಆಫೀಸಿಗೆ ಕಳುಹಿಸಿದ್ದಾರೆ. ಮತ್ತು ಬ್ಯಾಕ್‌ವರ್ಡ್‌ಕ್ಲಾಸ್‌ನಲ್ಲಿ ಎ.ಬಿ.ಸಿ.ಡಿ ಗ್ರೂಪನ್ನು ಗುರುತಿಸುವಾಗ ವ್ಯತ್ಯಾಸ ಮಾಡಿ ಕಳುಹಿಸಿದ್ದಾರೆ. ಅದಕ್ಕೆ ನಾವು ಏನು ಹೇಳಿದ್ದೇವೆ ಎಂದರೆ, ಅದಕ್ಕೇ ಹೊಂದಿಕೊಳ್ಳಬೇಕಾಗಿಲ್ಲ ಅದರಿಂದ ವೆರಿಫೀಕೇಶನ್ನು ತಂದಮೇಲೆ, ಅವರು ಆದಾಯದ ಸರ್ಟಿಫಿಕೇಟನ್ನು ಕೊಟ್ಟ ಮೇಲೆ ಆಯಾ ಗುಂಪಿನ ವಿಂಗಡನೆಯನ್ನು ಕೂಡಾ ಮಾಡತಕ್ಕಂಥದ್ದನ್ನು ನೋಡಬೇಕು

ಎನ್ನತಕ್ಕಂಥತ್ತಕ್ಕೆ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು, ಡಿಡಿಪಿಐ, ಅವರು ಮತ್ತು ನಮ್ಮ ಎಲ್ಲಾ ಕೇಂದ್ರ ಅಧಿಕಾರಿಗಳನ್ನು ನಾನು ಅಬ್‌ಸರ್ವರ್ಸ್ ಆಗಿ ಅಲ್ಲಿ ಕಳುಹಿಸಿ ಎಲ್ಲೆಲ್ಲಿ ಆಕ್ಷೇಪಣೆ ಬರುತ್ತದೆ, ಅದನ್ನು ಪರಿಪೂರ್ಣವಾಗಿ ತನಿಖೆ ಮಾಡಬೇಕು, ತನಿಖೆಯನ್ನು ಮಾಡಿಕೊಂಡು ಪರಿಪೂರ್ಣವಾದ ಲಿಸ್ಟ್ ಆಯಿತು ಎಂದು ಹೇಳಿದಮೇಲೆಮಾತ್ರ ಆಯಾ ಅಭ್ಯರ್ಥಿಗಳಿಗೆ ನೇಮಕಾತಿ ಆಜ್ಞೆ ಹೋಗಬೇಕು ಎಂದು ಹೇಳಿದ್ದೇವೆ. ಇನ್ನು ಕೂಡಾ ಯಾರಾದರೂ ಸನ್ಮಾನ್ಯ ಸದಸ್ಯರು ಎಲ್ಲೆಲ್ಲಿ ಲೋಪದೋಷಗಳು ಬಂದಿದೆ, ಎಲ್ಲೆಲ್ಲಿ ವಿಂಗಡಣೆಯಲ್ಲಿ ವ್ಯತ್ಯಾಸ ಬಂದಿದೆ, ಅದರ ಬಗ್ಗೆ ಮಾಹಿತಿಯನ್ನು ನೇರವಾಗಿ ಜಿಲ್ಲಾಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ, ಡಿಡಿಪಿಐ ಅವರಿಗೆ ಕೊಡಬಹುದು ಅಥವಾ ನಮ್ಮ ಆಯುಕ್ತರು, ಸಿಪಿಐ ಅವರಿಗೂ ಕೊಡಬಹುದು. ಅದನ್ನು ಕೊಟ್ಟರೆ ಅದನ್ನು ಪುನಃ ಪರಿಶೀಲನೆ ಮಾಡಿ, ತನಿಖೆಯನ್ನು ಮಾಡಿ ಯಾವುದೇ ದೋಷ ಇಲ್ಲದ ಹಾಗೆ ನೋಡುತ್ತಾರೆ. ಏಕೆಂದರೆ, ಇಲ್ಲಿ ಯಾವುದೇ ಭ್ರಷ್ಟಾಚಾರ ಆಗಬಾರದು, ಯಾವುದೇ ತೊಂದರೆ ಕೂಡಾ ಆಗಬಾರದು ಎನ್ನುವ ಒಂದು ಸದುದ್ದೇಶದಿಂದ ಈ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ. ಅದಕ್ಕೆ ನಾವು ಕೂಡಾ ಹೇಳಿದ್ದೇವೆ. ಪರಿಶೀಲನೆಯನ್ನು ಮಾಡದೆ, ವೆರಿಫಿಕೇಷನ್ ಮಾಡದೇ ಯಾವುದೇ ಒಂದು ವೈಯಕ್ತಿಕವಾದ ಆದೇಶವನ್ನು ಕಳುಹಿಸಬಾರದು ಎಂದು ಆದೇಶವನ್ನು ಕೊಟ್ಟಿದ್ದೇವೆ. ಇನ್ನೂ ಕೂಡಾ ಪರಿಶೀಲನೆ ಮಾಡತಕ್ಕಂಥ ಹಂತದಲ್ಲಿಯೇ ನಾವು ಇದ್ದೇವೆ. ಇದಕ್ಕಿಂತ ಮುಂದೆ ಹೋಗಲಿಲ್ಲ. ಅದು ಪರಿಪೂರ್ಣವಾದ ಮೇಲೆ ನಾವು ಆದೇಶವನ್ನು ಕೊಡುತ್ತೇವೆ. ಬೇರೆ ಬೇರೆ ಜಿಲ್ಲೆಯವರು ಕೂಡಾ ಬೇರೆ ಬೇರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿರುತ್ತಾರೆ ಎಂದು ಹೇಳಿದರು. ಕಾನೂನು ಪ್ರಕಾರ ಒಂದು ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್‌ನಲ್ಲಿ ರಿಜಿಸ್ಟರ್ ಮಾಡತಕ್ಕಂಥ ಹಕ್ಕು ಇರುವುದಿಲ್ಲ. ಅಂಥ ಮಿಸ್ಟೇಕ್ ಏನಾದರೂ ಆಗಿದ್ದರೆ ಅದನ್ನು ಪಾಯಿಂಟ್‌ಔಟ್ ಮಾಡಲಿಕ್ಕೆ it is still open, ಅದನ್ನು ಮಾಡಬಹುದು. ಎರಡನೆಯದು ಉದಾಹರಣೆ ಬಿಜಾಪುರ ಜಿಲ್ಲೆಯವರು ಬಿಜಾಪುರ ಜಿಲ್ಲೆಯಲ್ಲಿ ರಿಜಿಸ್ಟರ್ ಮಾಡದೇ ಬೆಳಗಾಂ ಜಿಲ್ಲೆಯಲ್ಲಿ ರಿಜಿಸ್ಟರ್ ಮಾಡಿದರೆ ನಿಯಮ ಉಲ್ಲಂಘನೆಯಾಗುವುದಿಲ್ಲ, ಆದುದರಿಂದ ಈ ನಿಯಮ ಎಲ್ಲಿಯಾದರೂ ಉಲ್ಲಂಘನೆಯಾಗಿದ್ದರೆ ಈಗಲೂ ಕೂಡಾ it is open for correction. We can always do it. ಯಾವ ಯಾವ ಜಿಲ್ಲೆಯಲ್ಲಿ ಈ ರೀತಿಯಲ್ಲಿ ವ್ಯತ್ಯಾಸವಾಗಿದೆ, ಅದನ್ನು ತಾವು ನನ್ನ ಗಮನಕ್ಕೆ ತರಬಹುದು. ಜಿಲ್ಲೆಯಲ್ಲಿಯೇ ಅಧಿಕಾರಿಗಳ ಗಮನಕ್ಕೆ ತರಬಹುದು ಅಥವಾ ನಮ್ಮ ಆಯುಕ್ತರ ಗಮನಕ್ಕೂ ತರಬಹುದು. i.e., before the orders are issued. ಅಂಥ ನಾವು ಹೇಳಿದ್ದೇವೆ. ಎಲ್ಲಿಯಾದರೂ ಅಧಿಕಾರಿಗಳ ಮಟ್ಟದಲ್ಲಿ ಲೋಪದೋಷಗಳು ಆಗಿದ್ದರೆ ನೆಕಸ್ಟ್ ಮಿನಿಟ್‌ನಲ್ಲಿಯೇ ನಾವು ಅಧಿಕಾರಿಗಳನ್ನು ಅಮಾನತ್ತಿನಲ್ಲಿಡುತ್ತೇವೆ ಎಂಬ ಸಂದೇಶವನ್ನು ಎಲ್ಲಾ ಅಧಿಕಾರಿಗಳಿಗೂ ತಿಳಿಸಿದ್ದೇವೆ. ಆದುದರಿಂದ ವ್ಯತ್ಯಾಸ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ವ್ಯತ್ಯಾಸವಾಗಿದ್ದರೆ ಅದನ್ನು ಸರಿ ಮಾಡತಕ್ಕಂಥ ಒಂದು ಜವಾಬ್ದಾರಿಯನ್ನೂ ಕೂಡ ಅಧಿಕಾರಿಗಳಿಗೆ ನಾವೇ ಕೊಟ್ಟಿದ್ದೇವೆ. ಈ ಪೂರ್ಣ ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಶಿಕ್ಷಕರ ನೇಮಕಾತಿಯ ಬಗ್ಗೆ ನಿಯಮವನ್ನು ಮಾಡಿರುವುದು ಬಹಳ ಆದರ್ಶವಾಗಿದೆ. ಇದರ ಬಗ್ಗೆ ಯಾರದು ತಕರಾರೇನೂ ಇಲ್ಲ. ಅದರಲ್ಲಿಯೂ ಕೆಲವು ಜಿಲ್ಲೆಗಳಲ್ಲಿ ಆಯ್ಕೆಯಾಗುವಾಗ ತಪ್ಪಾಗಿದೆ. ತಪ್ಪು ಆಯ್ಕೆ ಆಗಿರತಕ್ಕಂಥದ್ದು ಈಗಲೂ ನಡೆದಿದೆ. ನನಗೆ ಬಿಜಾಪುರದವರು ಬಂದು ಹೇಳಿದರು, ಮತ್ತು ಅದೇ ರೀತಿಯಲ್ಲಿ ಬೆಳಗಾಂನವರು ಕೂಡಾ ಹೇಳಿದ್ದಾರೆ. ಈ ರೀತಿಯಾಗಿ ಅನೇಕ ಜಿಲ್ಲೆಗಳಲ್ಲಿ ನಡೆದಿದೆ. ಇದನ್ನು ಸರಿಪಡಿಸುವುದಕ್ಕೆ ತಾವು ಒಂದು ಪ್ರಾಮಾಣಿಕವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಅದೇ ರೀತಿ ಮೈಸೂರು

ಜಿಲ್ಲೆಯಲ್ಲಿಯೂ ಅಪ್ರಾಮಾಣಿಕವಾದ ಪ್ರಸಂಗಗಳು ನಡೆದಿವೆ. ಅಂದರೆ ಯಾರೋ ಅಧಿಕಾರಿಗಳು ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿಲ್ಲ.

11.35 ಎ.ಎಂ

ಕೆಲವು ಸಾರಿ ನಿಮ್ಮ ವ್ಯವಸ್ಥೆಯೇ ಸರಿಯಿಲ್ಲದೆ ಇರಬಹುದು. ಅಂದರೆ ಇಡೀ ಸಮಗ್ರ ವ್ಯವಸ್ಥೆಯನ್ನು ನಾನು ವಿರೋಧ ಮಾಡುತ್ತಿಲ್ಲ. ಸಮಗ್ರವಾಗಿ ಇದನ್ನು ಸರಿಪಡಿಸಲು ಏನು ಕ್ರಮ ಕೈಗೊಂಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಸೂಚನೆಯ ಪ್ರಕಾರ ಆ ಕ್ರಮವನ್ನು ಕೈಗೊಳ್ಳುತ್ತೇವೆ.

ಮುಳಬಾಗಿಲು ಪಟ್ಟಣದಲ್ಲಿರುವ ಎಂ.ಇ.ಎಸ್ ಮಹಾವಿದ್ಯಾಲಯ

1178 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಜಿಲ್ಲೆಯಲ್ಲಿರುವ ಮುಳಬಾಗಿಲಿನ ಎಂ.ಇ.ಎಸ್. ಕಾಲೇಜನ್ನು ಸರ್ಕಾರ 1986ನೇ ಸಾಲಿನಲ್ಲಿ ವಹಿಸಿಕೊಂಡಾಗ ಅಂದಿನ ಆಡಳಿತ ಮಂಡಳಿಯವರು ನೇಮಕ ಮಾಡಿಕೊಂಡಿದ್ದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು?*

ಆ) *ಈ ಹುದ್ದೆಗಳನ್ನು ನೇಮಕ ಮಾಡುವಾಗ ಸರ್ಕಾರದ ನಿಯಮದಂತೆ ಮೀಸಲಾತಿ ನೀಡಲಾಗಿದೆಯೇ?*

ಇ) *ಮೀಸಲಾತಿ ನೀತಿಯಂತೆ ನೇಮಕ ಮಾಡದೆ ಇದ್ದಲ್ಲಿ ಆ ನೇಮಕಾತಿಗಳನ್ನು ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರು ಅನುಮೋದನೆ ನೀಡಿದ್ದಾರೆಯೇ?*

ಈ) *ಮೀಸಲಾತಿಯ ಬಗೆಗೆ ಸರ್ಕಾರ ನೀತಿಯನ್ನು ಪಾಲಿಸದೆ ನೇಮಕ ಮಾಡಿಕೊಂಡಿರುವ ಕಾಲೇಜಿನ ಆಡಳಿತ ಮಂಡಳಿಯ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವರೇ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) :

ಅ) ಬೋಧಕ ವರ್ಗಗಳ ಒಟ್ಟು ಸಂಖ್ಯೆ 45

(10 ಮಂದಿ ಸ್ಪಾಪ್ ಗ್ಯಾಪ್
ಉಪನ್ಯಾಸಕರು ಸೇರಿ)

ಬೋಧಕೇತರ ವರ್ಗದ ಒಟ್ಟು ಸಂಖ್ಯೆ 27

ಒಟ್ಟು 72

ಆ) ಹೌದು.

ಇ) ಇಲ್ಲ.

ಈ) ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ನಾರಾಯಣ ಸ್ವಾಮಿ: ಕೋಲಾರ ಜಿಲ್ಲೆಯ ಮುಳುಬಾಗಿಲಿನಲ್ಲಿರುವ ಎಂ.ಇ.ಎಸ್. ಕಾಲೇಜನ್ನು ಸರ್ಕಾರ 1986ರಲ್ಲಿ ವಹಿಸಿಕೊಂಡಾಗ 45 ಬೋಧಕ ವರ್ಗದವರು ಹಾಗೂ 27 ಬೋಧಕೇತರ ವರ್ಗದವರು ಇದ್ದರೆಂದು ಉತ್ತರ ಕೊಟ್ಟಿದ್ದೀರಿ. ಇಲ್ಲಿ ಮೀಸಲಾತಿ ಪದ್ಧತಿ ಪ್ರಕಾರ ನೇಮಕಾತಿ ಮಾಡಿರುವುದಿಲ್ಲವೆಂಬುದರ ಬಗ್ಗೆ